ಕಾಲಯಾನದಲ್ಲಿ ಒಂದಿಪ್ಪತ್ತು ವರ್ಷ ಹಿಂದಕ್ಕೆ ಹೋಗಿ. ಅಲ್ಲಿ, ಊರಿನ ಹೃದಯ ಭಾಗವಾದ, ಮೂರು ದಾರಿಗಳು ಸೇರುವ ಸರ್ಕಲ್‌ನಿಂದ ಕೆಲವೇ ಹೆಜ್ಜೆಗಳ ದೂರದಲ್ಲಿ, ರಸ್ತೆಯ ಪಕ್ಕದ ಎತ್ತರದ ದಿಬ್ಬದ ಮೇಲೆ, ಸಣ್ಣ ಹಂಚಿನ ಕೋಣೆಯಂತೆ ಕಾಣುವುದೇ ಬಾಬು ಭಂಡಾರಿಯ ಕಟಿಂಗ್ ಶಾಪ್ ಅಥವಾ ಸೂಪರ್ ಸಲೂನ್. ರಸ್ತೆಯ ಏರಿನಲ್ಲಿ ಏದುಸಿರು ಬಿಡುತ್ತಾ ಸಾಗುವ ಬಸ್ಸಿನ ಕಿಟಕಿಯಿಂದ ನೋಡುವವರಿಗೆ ಪಕ್ಕದ ಎತ್ತರದ ಜಾಗದಲ್ಲಿನ ಜುವಾರಿ ಸಿಮೆಂಟ್ ಜಾಹೀರಾತಿನ ಗೋಡೆಯ ಕೋಣೆಯೊಳಗೆ ಕುರ್ಚಿಯ ಮೇಲೆ ತಲೆ ಬಗ್ಗಿಸಿ ಕುಳಿತ ವ್ಯಕ್ತಿಯೂ, ಪಕ್ಕದಲ್ಲಿ ನಾಲಿಗೆ ಕಚ್ಚಿಕೊಳ್ಳುತ್ತಾ ತಲೆಗೆ ಬ್ಲೇಡೊತ್ತಿ ಆಡಿಸುತ್ತಿರುವ ಬಾಬು ಭಂಡಾರಿಯೂ ಗೋಚರಿಸುತ್ತಾರೆ. ನಿಂತಲ್ಲೇ ಮುನ್ನೂರಾ ಅರವತ್ತು ಡಿಗ್ರಿಗೆ ಎತ್ತ ಬೇಕಾದರೂ ತಿರುಗುವ ಕುರ್ಚಿಯ ಹತ್ತಿ ಕುಳಿತವರಿಗೆ ಟವಲ್ಲೊಂದನ್ನು ಅಡ್ಡ ಇಡುವ ಬಾಬು ಭಂಡಾರಿ ತನ್ನ ಪಿಚಕಾರಿಯಿಂದ ಪುಸ್ ಪುಸ್ ಎಂದು ನೀರು ಸಿಂಪಡಿಸುತ್ತಾನೆ. ಕಣ್ಣಳತೆಯಲ್ಲೇ ಕೂದಲಿನ ಉದ್ದ–ಗಿಡ್ಡಗಳನ್ನು ಅಳೆದು, ಕತ್ತರಿಸಬೇಕಾದುದು ಉಳಿಸಬೇಕಾದುದನ್ನು ಕ್ಷಣಮಾತ್ರದಲ್ಲಿ ನಿರ್ಧರಿಸುವ ಅವನ ಕಾಣದ ಸಂಗತಿಗಳೊಡನೆ ವ್ಯವಹರಿಸುವ ಕಲೆ ಸಾಮಾನ್ಯರ ಪಾಲಿಗೆ ಅತೀತವಾದುದಾಗಿದೆ.

ವಾರದುದ್ದಕ್ಕೂ ಅಷ್ಟಾಗಿ ರಶ್ ಆಗದ ಅವನ ಕಟಿಂಗ್ ಶಾಪ್ ಭಾನುವಾರದಂದು ಮಾತ್ರ ತುಂಬಿ ತುಳುಕುತ್ತದೆ. ಶಾಲೆಯ ಮಕ್ಕಳು ಮಾತ್ರವಲ್ಲದೇ ಪಟ್ಟಣದ ಉದ್ಯೋಗಕ್ಕೆ ಹೋಗುವವರೂ ಬರುವ ಆ ದಿನದಂದು ಸದಾ ಖಾಲಿಯಿರುವ ಅಂಗಳದ ಬೆಂಚೂ ಭರ್ತಿಯಾಗಿ ಅದರಾಚೆಗೂ ನಿಂತು ಕಾಯುವವರು ಗೋಚರಿಸುತ್ತಾರೆ.

ಮಂಗಳೂರಿನಲ್ಲಿ ತನ್ನ ಮಾವನ 'ಮಾಡರ್ನ್ ಸಲೂನ್'ನಲ್ಲಿ ಅಸಿಸ್ಟೆಂಟಾಗಿ ಕಲಿತು ಬಂದವ ಬಾಬು ಭಂಡಾರಿ. 'ಸೂಪರ್ ಸಲೂನ್' ಎನ್ನುವ ಹೆಸರೇ ಅವನಿಗೆ ಗೊತ್ತಿರಬಹುದಾದ ಆಧುನಿಕ ಸ್ಟೈಲುಗಳಿಗೆ ಸಾಕ್ಷಿ. ಅವನು ಹೇಳುವುದು ಸತ್ಯವೇ ಆದರೆ, ಮಂಗಳೂರಿನಲ್ಲಿ ಬಂದರಿನ ಹಡಗಿನ ಕ್ಯಾಪ್ಟನ್‌ನಿಂದ ಹಿಡಿದು ಡಾನ್‌ಗಳು ಸಹಾ ಇವನಿಂದ ಕಟಿಂಗ್ ಮಾಡಿಸಿಕೊಂಡಿದ್ದಾರೆ! ಹಾಗಂತ ಅವನು ತನ್ನ ಕತ್ತರಿಗೆ ತಲೆ ಕೊಟ್ಟು ಕುಳಿತ ಪ್ರತಿಯೊಬ್ಬನ ಬಳಿಯೂ ಜಂಭ ಕೊಚ್ಚಿದ್ದಿದೆ. ಅಂತಹ ಪ್ರಚಂಡ ಕ್ಷೌರಿಕನಾದ ನಿನಗೆ ಇಲ್ಲಿ ಆಲದ ಬಿಳಲಿನಂತಹ ಜುಟ್ಟು, ಲಂಟಾನ ಮಟ್ಟಿಯಂತಹ ಕೂದಲು ಬೆಳೆದ ನಮ್ಮೂರಿನವರಿಗೆ ಕಟಿಂಗ್ ಮಾಡುವ ಕರ್ಮವೇಕಯ್ಯಾ ಎಂದು ಕೇಳಬೇಕೆಂದು ಹಲವರಿಗೆ ಅನ್ನಿಸುತ್ತಾದರೂ, ತಮ್ಮ ಅಮೂಲ್ಯವಾದ ಮಂಡೆಯನ್ನು ಮತ್ತೆ ಅವನ ಕೈಗೇ ಕೊಡಬೇಕಿರುವುದರಿಂದ ಹೆದರಿ ಯಾರೂ ಏನೂ ಕೇಳುವುದಿಲ್ಲ.

ರಸ್ತೆಯ ಪಕ್ಕದ ಮರದ ಗೂಟಗಳ ಗೇಟನ್ನು ನೂಕಿ, ನಾಲ್ಕೈದು ಮೆಟ್ಟಿಲುಗಳ ದಿಬ್ಬವನ್ನೇರಿದವರು ಬಾಬು ಭಂಡಾರಿಯ ವರ್ಲ್ಡ್ ಫೇಮಸ್ ಸೂಪರ್ ಸಲೂನ್ ಪ್ರವೇಶಿಸುತ್ತಾರೆ. ಒಳಗಡಿಯಿಡುತ್ತಿದ್ದಂತೆಯೇ ಕಾಣುವ ಗೋಡೆಯ ಫೋಟೊದಲ್ಲಿನ ದೇವರುಗಳೂ ಇವನಿಂದಲೇ ಕಟಿಂಗ್ ಮಾಡಿಸಿಕೊಂಡಿದ್ದೇನೋ ಎಂಬಂತೆ ಕೊಂಚ ವಿಚಿತ್ರವಾಗಿ ಕಾಣುತ್ತಾರೆ. ಪಕ್ಕದ ಫೋಟೋಗಳಲ್ಲಿ ಹೃತ್ತಿಕ್ ರೋಶನ್, ಶಿವರಾಜ್‌ಕುಮಾರ್, ರಾಮ್‌ಕುಮಾರ್ ಮುಂತಾದವರು ಈಗಷ್ಟೇ ಇದೇ ಬಾಬುವಿನ ಕೈಯಲ್ಲಿ ಕಟಿಂಗ್ ಮಾಡಿಸಿಕೊಂಡವರಂತೆ ತಮ್ಮ ಲಕಲಕ ಹೊಳೆಯುತ್ತಿರುವ ಕೇಶರಾಶಿಯನ್ನು ತೋರಿಸುತ್ತಾ ಸ್ಟೈಲಾಗಿ ನಿಂತಿದ್ದಾರೆ. ಜೊತೆಗೇ 'ಸವಿತಾ ಸಮಾಜ' ಎಂಬ ಶೀರ್ಷಿಕೆಯಡಿ ಕಟಿಂಗ್, ಶೇವಿಂಗ್, ಎಣ್ಣೆ ಮಸಾಜ್ ಮುಂತಾದ ಸೇವೆಗಳ ದರ ಪಟ್ಟಿಯಿರುವ ಬೋರ್ಡು ನೇತಾಡುತ್ತಿದೆ. ಅವುಗಳ ಪೈಕಿ ಕಟ್ಟಕಡೆಯಲ್ಲಿರುವ 'ಬಾಬು ಸ್ಪೆಷಲ್ ಹೇರ್ ಕಟ್' ಎನ್ನುವ ವಿಶ್ವ ವಿಖ್ಯಾತ ಕಟಿಂಗನ್ನು ಮಾಡಿಸುವ ಧೈರ್ಯ ಇದುವರೆಗೆ ಹೆಚ್ಚಿನವರು ಮಾಡಿಲ್ಲ. ಅಂತಹ ಪ್ರಯೋಗಕ್ಕಿಳಿದ ಕೆಲವರು ಕೊನೆಗೆ 'ತಿರುಪತಿ ಬೋಡಿ' ಹೊಡೆಸಬೇಕಾಗಿ ಬಂದಿರುವುದು ಎಲ್ಲರಿಗೂ ಗೊತ್ತಿರುವ ರಹಸ್ಯ ಸತ್ಯ.

ಉದಯವಾಣಿ, ಪ್ರಜಾವಾಣಿಗಳಂತಹ ದಿನಪತ್ರಿಕೆಗಳಿಂದ ಹಿಡಿದು ಸುಧಾ, ತರಂಗ ಮುಂತಾದ ವಾರಪತ್ರಿಕೆಗಳೂ ಬಾಬು ಭಂಡಾರಿಯ ಸಲೂನಿನಲ್ಲಿ ಕಾಣಸಿಗುತ್ತವೆ. ಅವುಗಳ ಪೈಕಿ ಕೆಲವು ಮಾತ್ರ ಓದುವ ಸ್ಥಿತಿಯಲ್ಲಿದ್ದರೆ ಇನ್ನುಳಿದವು ಹಾಳೆ ಹಾಳೆಯಾಗಿ ಹರಿಯಲ್ಪಟ್ಟು, ಗಿರಾಕಿಯ ಮುಖಕ್ಕೆ ಬಳಿದು, ಬಳಿಕ ಒರೆಸುವ ಶೇವಿಂಗ್ ಕ್ರೀಮನ್ನು ಮೈತುಂಬಾ ಮೆತ್ತಿಕೊಳ್ಳಲು ತಯಾರಾಗಿ ನಿಂತಿವೆ. ಅವು ಮಾತ್ರವಲ್ಲದೇ ಕಳೆದ ತಿಂಗಳು ಊರಿನಲ್ಲಿ ನಡೆದ 'ಮಂದಾಕಿನೀ ಕಲ್ಯಾಣ' ಪ್ರಸಂಗದ ಭಿತ್ತಿಪತ್ರಗಳೂ, ತೀರ್ಥಹಳ್ಳಿಯಲ್ಲಿ ಜರುಗಿದ ಜಂಬೋ ಸರ್ಕಸ್‌ನ ಪೋಸ್ಟರ್‌ಗಳೂ,



